5 NOV 2003

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕದ ಇಕೋ-ಟೂರಿಸಂ (Eco-tourism) ಸ್ಥಳಗಳಲ್ಲಿ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ನಿಷೇಧಿಸುವ ಬಗ್ಗೆ (ಕರಾವಳಿ ಪ್ರದೇಶ ಹೊರತುಪಡಿಸಿ)

ಓದಲಾಗಿದೆ: 1) ಕರ್ನಾಟಕ ಸರ್ಕಾರದ ಪರಿಸರ (ರಕ್ಷಣೆ) ಕಾಯ್ದೆ 1986
2) ಕರ್ನಾಟಕ ಸರ್ಕಾರದ ವನ್ಯ ಜೀವಿ (ರಕ್ಷಣೆ) ಕಾಯ್ದೆ 1972.

*****

ಪ್ರಸ್ತಾವನೆ:

ಕರ್ನಾಟಕದ ಇಕೋ-ಟೂರಿಸಂ ಸ್ಥಳಗಳಿಗೆ ಬರುವ ಪ್ರವಾಸಿಗರು 'ಉಪಯೋಗಿಸಿ ಬಿಸಾಡುವಂತಹ' ಪ್ಲಾಸ್ಟಿಕ್ ವಸ್ತುಗಳಾದ ಪ್ಲಾಸ್ಟಿಕ್ ಕೈಚೀಲ, ಕಪ್ಪು ಲೋಟ, ಚಮಚ ಫೋರ್ಕ್, ಸ್ಟ್ರಾಗಳ ಬಳಕೆ ಹೆಚ್ಚಾಗುತ್ತಿದೆ. ಈ ಪ್ಲಾಸ್ಟಿಕ್ ವಸ್ತುಗಳು ಜೈವಿಕವಾಗಿ ಅವನತಿ ಹೊಂದುವುದಿಲ್ಲವಾದ್ದರಿಂದ ಇವುಗಳು ಸಂಗ್ರಹವಾಗುತ್ತಿದ್ದು ಪ್ಲಾಸ್ಟಿಕ್ ತ್ಯಾಜ್ಯಗಳ ನಿರ್ವಹಣೆ ಗಂಭೀರ ಸಮಸ್ಯೆಯಾಗಿದೆ. ಅಜಾಗರೂಕತೆಯಿಂದ ಎಸೆದ ಪ್ಲಾಸ್ಟಿಕ್ ವಸ್ತುಗಳು ಚರಂಡಿಯಲ್ಲಿ ಸೇರಿ ತಡೆಯುಂಟಾಗುವುದು, ಮಣ್ಣಿನಲ್ಲಿನ ರಂಧ್ರಗಳನ್ನು ಪ್ರತಿಬಂಧಿಸುವುದು, ಮಣ್ಣಿನಲ್ಲಿನ ಸೂಕ್ಷ್ಮಜೀವಿಗಳ ಚಟುವಟಿಕೆಯಲ್ಲಿ ಅಡಚಣೆ ಉಂಟು ಮಾಡಿ ಮಣ್ಣಿನ ಮಾಲಿನ್ಯಕ್ಕೆ ಕಾರಣವಾಗುವುದು. ಪ್ಲಾಸ್ಟಿಕ್ ಮಣ್ಣಿನಲ್ಲಿ ಮಳೆಯ ನೀರಿನ ಜಿನುಗುವಿಕೆಯನ್ನು ತಡೆಯುವುದಲ್ಲದೆ ಭೂಗತ ಅಂತರ್ಜಲದ ವೃದ್ಧಿಗೆ ಅಡಚಣೆ ಮಾಡುವುದು. ವನ್ಯಜೀವಿಗಳು ಕೆಲವು ಪ್ಲಾಸ್ಟಿಕ್ ವಸ್ತುಗಳನ್ನು ಆಹಾರದ ಜೊತೆಯಲ್ಲಿ ಸೇವಿಸಿ ಉಸಿರುಕಟ್ಟಿ ಸಾಯುತ್ತವೆ. ಆದ್ದರಿಂದ ಮೇಲೆ ತಿಳಿಸಿರುವ ಪ್ಲಾಸ್ಟಿಕ್ ವಸ್ತುಗಳನ್ನು ಕರ್ನಾಟಕದ ಇಕೋ-ಟೂರಿಸಂ ಸ್ಥಳಗಳಲ್ಲಿ ಬಳಸುವುದು ವನ್ಯಜೀವಿಗಳ ಮತ್ತು ಅವುಗಳ ಪರಿಸರಕ್ಕೆ ಹಾನಿಕಾರಕವಾಗಿರುತ್ತದೆ.

ಸರ್ಕಾರದ ಪರಿಸರ (ರಕ್ಷಣೆ) ಕಾಯ್ದೆ 1986 ಕಲಂ 5 ರನ್ವಯ ಪ್ರದತ್ತವಾದ ಅಧಿಕಾರದನ್ವಯ ಸರ್ಕಾರ ಯಾವುದೇ ಅಧಿಕಾರಿ, ವ್ಯಕ್ತಿ ಅಥವಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಬಹುದಾಗಿದೆ ಮತ್ತು ಅಂತಹ ಅಧಿಕಾರಿ, ವ್ಯಕ್ತಿ ಅಥವಾ ಪ್ರಾಧಿಕಾರವು ಸದರಿ ನಿರ್ದೇಶನದ ಪಾಲಿಸುವಿಕೆಗೆ ಬದ್ಧರಾಗಿರುತ್ತಾರೆ. ಆದ್ದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ :ಅಪಜೀ 244 ಇಎನ್‌ವಿ 2003 (V), ಬೆಂಗಳೂರು, ದಿನಾಂಕ : 23-10-2003**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪರಿಸರ (ರಕ್ಷಣೆ) ಕಾಯ್ದೆ 1986 ಕಲಂ 5 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಸರ್ಕಾರವು ಆಯುಕ್ತರು (ಪ್ರವಾಸೋದ್ಯಮ), ಪ್ರವಾಸೋದ್ಯಮ ಇಲಾಖೆ ಇವರಿಗೆ ಯಾವುದೇ ವ್ಯಕ್ತಿಯಿಂದ ಪ್ಲಾಸ್ಟಿಕ್ ವಸ್ತುಗಳಾದ ಪ್ಲಾಸ್ಟಿಕ್ ಕೈಚೀಲ (ಅಳತೆ ಮತ್ತು ದಪ್ಪವನ್ನು ಗಣನೆಗೆ ತೆಗೆದುಕೊಳ್ಳದೆ) ಕಪ್ಪು ಲೋಟ, ಚಮಚ, ಫೋರ್ಕ್, ಸ್ಟ್ರಾಗಳ ಉಪಯೋಗವನ್ನು ಈ ಕೆಳಗಿನ ಅನುಬಂಧದಲ್ಲಿ ಸೂಚಿಸಿರುವ ಇಕೋ-ಟೂರಿಸಂ ಸ್ಥಳಗಳಲ್ಲಿ ನಿಷೇಧಿಸಲು ಎಲ್ಲಾ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಈ ಮೂಲಕ ಆದೇಶಿಸಲಾಗಿದೆ.

ಅನುಬಂಧ

| ಕ್ರಮ ಸಂಖ್ಯೆ | ಇಕೋ-ಟೂರಿಸಂ ಸ್ಥಳಗಳ ಹೆಸರು | ಸ್ಥಳ |
|---|---|---|
| 1 | ಬೃಂದಾವನ ಉದ್ಯಾನವನ (ಕೆ.ಆರ್.ಎಸ್) | ಮೈಸೂರು |
| 2 | ಹಂಪಿ ಹೆರಿಟೇಜ್ ಕಾಂಪ್ಲೆಕ್ಸ್ | ಬಳ್ಳಾರಿ |

| | | |
|---|---|---|
| 3 | ಬೇಲೂರು, ಹಳೇಬೀಡು ಮತ್ತು ಶ್ರವಣ ಬೆಳಗೊಳ ದೇವಾಲಯಗಳು | ಹಾಸನ |
| 4 | ಸೋಮನಾಥಪುರ ದೇವಾಲಯ | ಮಂಡ್ಯ |
| 5 | ಜೋಗ ಜಲಪಾತ | ಶಿವಮೊಗ್ಗ |
| 6 | ಗೋಲಗುಂಬಜ್ | ಬಿಜಾಪುರ |
| 7 | ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲು | ಬಾಗಲಕೋಟೆ |
| 8 | ನಂದಿ ಬೆಟ್ಟ | ಬೆಂಗಳೂರು |

ಸದರಿ ನಿರ್ದೇಶನವನ್ನು ಕೂಡಲೇ ಜಾರಿಗೊಳಿಸುವುದು. ನಿರ್ದೇಶನವನ್ನು ಪಾಲಿಸದಿದ್ದಲ್ಲಿ ಪರಿಸರ (ರಕ್ಷಣ) ಕಾಯ್ದೆ, 1986 ರ ಕಲಂ 15 ಮತ್ತು 17ರಲ್ಲಿನ ದಂಡನೀಯ ಅವಕಾಶಗಳು ಅನ್ವಯವಾಗುತ್ತವೆ.

ಆಯುಕ್ತರು (ಪ್ರವಾಸೋದ್ಯಮ), ಪ್ರವಾಸೋದ್ಯಮ ಇಲಾಖೆ ಇವರು ಕೈಗೊಂಡ ಕ್ರಮದ ಬಗ್ಗೆ ಕಾರ್ಯದರ್ಶಿ (ಪರಿಸರ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರಿಗೆ ಪ್ರತಿ ತಿಂಗಳು ನಿಯಮಿತವಾಗಿ ವರದಿ ನೀಡುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಆರ್.ಗಾಯ್ಕವಾಡ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

<u>ಇವರಿಗೆ :</u>

1) ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.
2) ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-1.
3) ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾರ್ತಾ, ಪ್ರಚಾರ ಮತ್ತು ಪ್ರವಾಸೋದ್ಯಮ ಇಲಾಖೆ, ಬೆಂಗಳೂರು.
6) ಆಯುಕ್ತರು (ಪ್ರವಾಸೋದ್ಯಮ), ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7) ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಶ್ರೀ